ಕಂಪಿಸತೊಡಗಿದ್ದವು.

ಅವಳು ದಿಂಬಿಗೊರಗಿ ಮಲಗಿದ್ದಳು. ನಿದ್ರೆ ಹತ್ತಿರವೂ ಸುಳಿದಿರಲಿಲ್ಲ. ಅವನೂ ಪಕ್ಕದ ಕೋಣೆಯಲ್ಲಿ ಮಲಗಿದ್ದ. ಬಹುಶಃ ನಿದ್ದೆ ಮಾತ್ರೆಗಳನ್ನು ನುಂಗಿ.

ಅವಳಿಗೆ ತನ್ನ ನಿದ್ದೆ ಬಾರದದ್ದಕ್ಕಾಗಿ ಸಿಟ್ಟು ಬರಲಿಲ್ಲ, ಅವನ ನಿದ್ದೆಯ ಮೇಲೂ ಕೋಪ ಬರಲಿಲ್ಲ. ಬೀದಿಯಲ್ಲಿ ನಡೆಯುತ್ತಾ ನಡೆಯುತ್ತಾ ನಾವಿಬ್ಬರೂ ಎಲ್ಲೋ ಹೀಗೆ ಭೇಟಿಯಾದಾಗಲೆಲ್ಲ ಯಾಕೆ ಈ ಮಾಯದ ಮನೆ ಹುಟ್ಟಿಕೊಂಡು ಬಿಡುತ್ತೆ ಗೊತ್ತಿಲ್ಲ. ಇದೊಂದೇ ನೋವು ಅವಳ ಹೃದಯವನ್ನು ಹಿಂಡುತ್ತಿತ್ತು. ಘಾಸಿಗೊಳಿಸುತ್ತಿತ್ತು. ಅವಳು ಮತ್ತೆ ಮತ್ತೆ ಇದೇ ಯೋಚಿಸುತ್ತಿದ್ದಳು.

ಅವಳಿಗೆ ನಗು ಬಂತು. ಯೌವನ ತುಂಬಿ ಹರಿಯುತ್ತಿದ್ದಾಗಲಾದರೆ ಸರಿ. ಈಗ್ಯಾಕೆ ಹೀಗೆ ಆಗುತ್ತಿದೆ? ಇಂದೇಕೆ ಹೀಗನಿಸಿತು?. ಗೊತ್ತಿಲ್ಲ ಅದೇನಿತ್ತೋ ಏನೋ ಅದ್ಯಾವುದೂ ಅವಳ ಎಣಿಕೆಗೆ ಎಟಕುವಂತಿರಲಿಲ್ಲ.

ರಾತ್ರಿ ಹೇಗೆ ಕಳೆಯಿತೆಂದೇ ತಿಳಿಯಲಿಲ್ಲ. ಡ್ರೈವರ್ ಬಾಗಿಲನ್ನು ಮೆಲ್ಲಗೆ ಬಡಿದು ಏರ್‌ಪೋರ್ಟ್‌ಗೆ ಹೋಗುವ ಸಮಯವಾಯಿತೆಂದು ಎಚ್ಚರಿಸುತ್ತಿದ್ದ...

ಅವಳು ಸೀರೆಯುಟ್ಟುಕೊಂಡು, ಸೂಟ್‌ಕೇಸ್ ಎತ್ತಿಕೊಂಡಳು. ಅವನೂ ಎದ್ದು ತನ್ನ ಕೋಣೆಯಿಂದ ಹೊರಬಂದ. ಅವರಿಬ್ಬರೂ ಹೊರಗೆ ಬೀದಿಗೆ ತೆರೆದುಕೊಳ್ಳುತ್ತಿದ್ದ ಬಾಗಿಲಿನೆಡೆಗೆ ಹೆಜ್ಜೆ ಹಾಕಿದರು.

ಡ್ರೈವರ್ ಅವಳ ಕೈಯಿಂದ ಸೂಟ್‌ಕೇಸ್ ತೆಗೆದುಕೊಂಡ. ಅವಳಿಗೆ ಆ ಕ್ಷಣ ತನ್ನ ಕೈಗಳು ಖಾಲಿಖಾಲಿಯಾದಂತೆನಿಸಿ ಬಾಗಿಲಲ್ಲೇ ಹೆಜ್ಜೆಗಳು ತಡವರಿಸಿದಂತಾದವು. ಪುನಃ ಸಾವರಿಸಿಕೊಂಡು ಒಳಗೆ ಹೋಗಿ ಮಲಗಿದ್ದ ಅಮ್ಮನಿಗೆ ಅವೇ ಖಾಲಿ ಕೈಗಳಿಂದ ನಮಸ್ಕರಿಸಿ ಹೊರಬಂದಳು.

ಮತ್ತೆ ಏರ್‌ಪೋರ್ಟ್‌ಗೆ ಹೋಗುವ ರಸ್ತೆ ಶುರುವಾಗಿ, ಕೊನೆಗೊಳ್ಳುತ್ತಲೂ ಬಂತು...ಆದರೆ ಅವನು ಸುಮ್ಮನೇ ಇದ್ದ ...ಅವಳೂ ಕೂಡ...

ಒಮ್ಮೆಲೇ ಅವನೆಂದ – 'ನೀನು ಏನೋ ಹೇಳಿದೆಯಾ?'

'ಇಲ್ಲ'



ಮತ್ತೆ ಅವನು ಸುಮ್ಮನಾಗಿಬಿಟ್ಟ.

ಇಬ್ಬರಿಗೂ ಅನಿಸುತ್ತಿತ್ತು. ಬಹುಶಃ ಹೇಳಲು – ಕೇಳಲು ಬೇಕಾದಷ್ಟಿತ್ತು. ಆದರೆ ಬಹಳ ತಡವಾಗಿ ಹೋಗಿತ್ತು. ಈಗ ಎಲ್ಲ ಶಬ್ದಗಳೂ ಭೂಮಿಯಲ್ಲಿ ಹೂತುಹೋಗಿ ಅವೆಲ್ಲವೂ ತಾಳೆ ಮರಗಳಾಗಿಬಿಟ್ಟದ್ದವು. ಹೃದಯದ ಕಡಲ ತಡಿಯಲ್ಲಿ ನೆಟ್ಟ ಆ ಮರಗಳ ಎಲೆಗಳು ಈ ಭೂಮಿಯ ಮೇಲೆ ಗಾಳಿ ಇರುವವರೆಗೂ ಕಂಪಿಸುತ್ತಲೇ ಇರುತ್ತವೆ.

ಏರ್‌ಪೋರ್ಟ್ ಬಂದೇಬಿಟ್ಟಿತು. ಪಾದಗಳಡಿಯಿಂದ ಅವನ ಶಹರಿನ ರಸ್ತೆ ಕುಸಿದುಹೋಯಿತು...

●